ಗೊತ್ತು ಮಾಡಿತ್ತು. ಆದರೆ ಚುನಾವಣೆಯನ್ನು ಎದುರಿಸುವುದಕ್ಕೆ ಆಗದೆ ಅಥವಾ ಚುನಾವಣೆ ಯಾಗಿ ಅಧಿಕಾರ ವಿಕೇಂದ್ರೀಕರಣ ಆಗುವುದರ ಬಗ್ಗೆ ನಂಬಿಕೆ ಇಲ್ಲದೆ, ಗ್ರಾಮೀಣ ಜನರ ಬಗ್ಗೆ ವಿಶ್ವಾಸ ಇಲ್ಲದೆ ಚುನಾವಣೆಯನ್ನು ಮುಂದೂಡುತ್ತಿದ್ದೀರಿ. ರೈತರ ಬಡ್ಡಿ ಮನ್ನಾ ಮಾಡುವುದಕ್ಕೆ ಸಿದ್ಧರಿಲ್ಲ. ಅಂದರೆ ಇದು ರೈತ ವಿರೋಧಿ ನೀತಿಯಾಗಿದೆ. ಗ್ರಾಮೀಣ ಜನರ ಬಗ್ಗೆ ಕಳಕಳಿ ಇಲ್ಲ. ಇಂಥ ಸಂದರ್ಭದಲ್ಲಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ. ಇವತ್ತು ಏನು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ಮಾಡುವುದಕ್ಕಾಗಿದೆ ಚುನಾವಣೆ ಮುಂದೂಡುತ್ತಿದ್ದೀರಿ, ಕೊನೆಯ ಬಜೆಟ್ಟಿನಲ್ಲಿ ಆದರೂ ರೈತರ ಋಣ ತೀರಿಸಿ ಬಡ್ಡಿ ಮನ್ನಾ ಮಾಡಿ ಅವರು ಬದುಕುವುದಕ್ಕೆ ಅವಕಾಶ ಮಾಡಿಕೊಡುತ್ತೀರೆಂದು ತಿಳಿದುಕೊಂಡಿದ್ದೆವು. ಆದರೆ ಈಗ ನಿಮ್ಮ ಉತ್ತರ ಕೇಳಿದ ಮೇಲೆ ನಾವು ವಾಕ್‌ಔಟ್ ಮಾಡುತ್ತೇವೆ.

(ಬಿ ಜೆ ಪಿ ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಧ್ಯಪ್ರದೇಶದ ಸರ್ಕಾರ ರೈತರಿಗೆ ಬಡ್ಡಿ ಮನ್ನಾ ಮಾಡಿ ಮಾಡಿ ಸರ್ಕಾರದಿಂದಲೇ ವಾಕ್‌ಔಟ್ ಆಯಿತು. ಈಗ ತಾವು ವಾಕ್‌ಔಟ್ ಮಾಡುತ್ತಿದ್ದೀರಿ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ. —ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದು ಇಷ್ಟೆ. ನಾನು ಸಭಾತ್ಯಾಗ ಮಾಡುತ್ತಿಲ್ಲ. ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಬೇಕೆಂದು ಇವರು ಒತ್ತಾಯ ಮಾಡುತ್ತಿದ್ದೀರಲ್ಲಾ ಇವರ ಬಗ್ಗೆ ನಾನು ಸ್ವಲ್ಪ ಮಾತ ನಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅವರು ಹೋದಮೇಲೆ ಮಾತನಾಡುತ್ತೀರಲ್ಲ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ.—ಹೊರಗಡೆ ಹೋಗಿಯೂ ಹೇಳುತ್ತೇನೆ. ಬಡ್ಡಿ, ಸುಸ್ತಿ ಬಡ್ಡಿ ಬಗ್ಗೆ ಮಾತನಾಡುವವರು, ರೈತರ ಬಗ್ಗೆ ಬಹಳ ಕಳಕಳಿ ಇದೆ ಎಂದು ಮಾತನಾಡುವವರು ಯಾರೇ ಆಗಲಿ, ಬರೀ ನಾನು ಬಿಜೆಪಿ ಯವರ ಬಗ್ಗೆ ಅಥವಾ ತಮ್ಮ ಬಗ್ಗೆ ಮಾತನಾಡುತ್ತಿಲ್ಲ. ಬೆಲೆ ಹಾನಿಯಾಗುತ್ತಿದೆಯಲ್ಲ ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಿ, ಬೆಲೆ ರಕ್ಷಣೆಗೆ ಕ್ರಮ ತೆಗೆದು ಕೊಳ್ಳಿ ಎಂದು ಸುಮಾರು ದಿನಗಳಿಂದ ಕೇಳುತ್ತಿದ್ದೇವೆ. ಇಲ್ಲಿಯೂ ಒಂದು ಕಡೆ ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ೧೨೦ ಖರೀದಿ ಕೇಂದ್ರಗಳನ್ನು ತೆಗೆದು ಬೆಲೆ ರಕ್ಷಣೆ ಮಾಡಿದೆವು ಎಂದು ಹೇಳಿದ್ದೀರಿ. ಇದು ಹಸಿ ಸುಳ್ಳು. ಎಲ್ಲಿಯೂ ಒಂದು ಖರೀದಿ ಕೇಂದ್ರವನ್ನು ತೆರೆಯಲಿಲ್ಲ. ರೈತನಿಗೆ ಬೆಲೆ ರಕ್ಷಣೆ ಮಾಡಿಕೊಡುವ ಕೆಲಸ ಮಾಡಲಿಲ್ಲ. ನಮಗೆ ಸಾಲ ರದ್ದು ಬೇಡ, ಎಲ್ಲಿಯವರೆಗೆ ನೀವು ಬೆಳೆ ರಕ್ಷಣೆ ಮಾಡುವುದಿಲ್ಲ ಅಲ್ಲಿಯವರೆಗೆ ನಾವು ಸಾಲಗಾರರಲ್ಲವೆಂದು ಹೇಳಿದ್ದೇವೆ, ಸಾಲ ರದ್ದಾಗಿದೆ ಎಂದು ಹೇಳಿದ್ದೇವೆ. ಸಾಲ ಕೊಡುವುದಿಲ್ಲವೆಂದು ಹೇಳಿದ್ದೇವೆ, ಸಾಲ ಕೊಡುತ್ತಿಲ್ಲ, ಕೊಡುವುದೂ ಇಲ್ಲ. ಆ ಕಾರಣ ನೀವು ಮೊದಲು ಮಾಡಬೇಕಾಗಿರುವುದು, ಒಂದು ಸುಗ್ಗಿಯಿಂದ ಇನ್ನೊಂದು ಸುಗ್ಗಿಯ ವರೆಗೆ ಬೆಲೆ ವ್ಯತ್ಯಾಸವಾಗದೆ ಇರುವಂತೆ ಒಂದು ವ್ಯವಸ್ಥೆಯನ್ನು ತಾವು ಮಾಡುತ್ತೀರಾ ? ಅದನ್ನು ಹೇಳಿ. ನಾನು ಖಾಸಗಿಯಾಗಿ ಮಾತನಾಡಿದಾಗಲೂ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡೆ. ನೀವು ಕೆಟ್ಟುಹೋಗಿರುವ ಒಂದು ಜೀಪನ್ನು ಹರಾಜು ಮಾಡಬೇಕಾದರೂ ಒಂದು ನೀತಿ ಇಟ್ಟು ಕೊಂಡಿದ್ದೀರಿ. ಸರ್ಕಾರಿ ಸವಾಲು ಇರುತ್ತದೆ, ಅದರ ಮೇಲೆ ಮಾತ್ರ ಹರಾಜು ಕೂಗಬೇಕು ಎಂದು. ಅಂಥಾದ್ದು ಒಂದು ಸಣ್ಣ ಕಾನೂನು ಮಾಡುವುದಕ್ಕೆ ಆಗಲಿಲ್ಲವೆಂದರೆ ರೈತನ ಬಗ್ಗೆ ಏನು ಕಣ್ಣೀರು ಸುರಿಸುತ್ತೀರಿ ? ಅದರ ಬಗ್ಗೆ ಬಿಜೆಪಿಯವರು ಮಾತನಾಡುವುದಿಲ್ಲ ಏಕೆಂದರೆ ಅವರದ್ದು ಮಾರ್ವಾಡಿಗಳಿಗೆ ಹುಟ್ಟಿದ ಪಕ್ಷ. ಆದರೆ ನೀವು ಏನು ಎಂದು ನನಗೆ ಅನುಮಾನ ಬರುತ್ತಿದೆ, ನೀವು ಇನ್ನೂ ಕಾನೂನು ಮಾಡದಿದ್ದರೆ ನೀವು ಯಾರು ಎಂದು ನನಗೆ ಅನುಮಾನ ಬರುತ್ತಿದೆ. ಆದುದರಿಂದ ಅನುಮಾನ ಬಾರದೆ ಇರುವ ರೀತಿ ತಾವು ವರ್ತನೆ ಮಾಡಬೇಕು. ಬೆಲೆ ರಕ್ಷಣೆಗೆ ಕಾನೂನು ಮಾಡಿ, ನಮಗೆ ಸಾಲ ಬೇಡ. ವ್ಯವಸಾಯದ ಖರ್ಚು ಏನಿದೆ ಲೆಕ್ಕ ಹಾಕಿಬೆಲೆ ಪ್ರಕಟಣೆ ಮಾಡಿ, ಆ ಬೆಲೆ ಯನ್ನು ನಮಗೆ ಕೊಡಿಸಿ, ನಮಗೆ ಸಾಲ ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮ ಪ್ರಾಚಾರ್ಯರಾದಂಥ ಮಾನ್ಯ ನಂಜುಂಡಸ್ವಾಮಿಯವರ ವಾದವನ್ನು ೧೦೦ ಕ್ಕೆ ೧೦೦ ಪಾಲು ನಾನು ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾರ್ವಾಡಿಗಳಿಗೆ ಹುಟ್ಟಿದವರೆಂದೇ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅದೂ ಸೇರಿ. ಈಗ ಮಾನ್ಯ ಪ್ರಾಚಾರ್ಯರು ಹೇಳಿದ ಪ್ರಕಾರ ರೈತರಿಗೆ ಸರಿಯಾದಂಥ ಬೆಲೆಗಳನ್ನು ನಾವು ಎಲ್ಲಿಯವರೆಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ರೈತರ